96(2)

RegaNo BG 155

— ಶ್ರೀ —

20—2—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ದೇಹ ಪತ್ತೆ

29 ವರ್ಷಗಳ ಹಿಂದೆ ಸಹಾರಾಕ್ಕೆ ಬಂದ ಬರ್ಮಿಂಗ್ಹಾಂನ ವಿಲಿಯಂ ನ್ಯೂಟ್ಸ್ ಎಂಬ ಪೈಲೆಟ್‌ನ ದೇಹ ದೊರೆತಿದೆ. ಬಿಸಿ ಮರಳಿನ ಪದರದಲ್ಲಿ ಈ ದೇಹ ರಕ್ಷಣೆಯಾಗಿದ ಫ್ರೆಂಚ್ ಕ್ಯಾಮೆಲ್ ದಳ ಈ ದೇಹವನ್ನು ಕಂಡೆಸಿದೆ

ಕಲ್ಲಿನೇಟು

ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀಯು ಎಸ್ ಧೇಬರು ಜೆಟ್ಪುಂದಲ್ಲಿ ಮೊನ್ನೆ ಕಾಂಗ್ರೆಸಿನ ಚುನಾವಣೆ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಕಲ್ಲೇಟು ಬಿದ್ದವು.

ಮಗಳ ಬಲಿ

ಆಗ್ರಾದ ಗುಂಡ್ರಿ ಮುನ್ಸಿಂ ಖಾರ್ ಪ್ರದೇಶದ ಶಕರ್ಪರಿ ಮಾಂಬವನನ್ನು ಪೋಲೀಸರು ಬಂಧಿಸಿರುವರು. ಅನುಗ್ರಹ ಪಡೆಯಲು ಅವನು ತನ್ನ ೪ ವರ್ಷದ ಮಗುವಿನ ತಲೆ ಕತ್ತರಿಸಿ ಅಳಿಯ ಕಾಳೀ ದೇವಾಲಯಕ್ಕೆ ತೆಗೆದುಕೊಂಡು ಹೋದನು.

ಸಕ್ಕರೆ ಕಾರ್ಖಾನೆ

ಖಿದರೆಯಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗುವ ಅಶಯವನ್ನು ಮುಖ್ಯ ಮಂತ್ರಿ ಶ್ರೀ ಬಿಡಿ ಒತ್ತಿಯವರು ತಿಳಿಸಿದ್ದಾರೆ

ಮ್ಯೂಸಿಯಂ ಸ್ಥಾಪನೆ

ನಾನಾ ರಾಜ್ಯಗಳಲ್ಲಿ ವ್ಯವಸಾಯದ ಮ್ಯೂಸಿಯಂಗಳನ್ನು ಸ್ಥಾಪಿಸಲು ಭಾರತದ ಕೃಷಿಕ ಸಮಾಜ ನಿರ್ಧರಿಸಿದೆ.

ಪ್ರತಿಭಟನೆ

ಸಿಂಕಿಯಾಂಗಿನಲ್ಲಿ ಭಾರತ ವಿಮಾನವೊಂದು ಗಡಿ ಭಂಗ ಮಾಡಿತೆಂದು ಸವಿಣ ಭಾರತಕ್ಕೆ ಪ್ರತಿಭಟಿಸಿದೆ.

ವಿವಿಧ ವಾರ್ತೆಗಳು

ರೂರ್ಕೆಲಾದಲ್ಲಿ ಮೊನ್ನೆ ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ, ರಾಷ್ಟ್ರೀಕರಣವಾದ ಕಾರ್ಖಾನೆಯಲ್ಲಿ ಕಾರ್ಮಿಕರು ಗುಲಾಮರಾಗುವರು, ಉತ್ಪಾದನೆ ಕೊಂದರೆಗೊಳಗಾಗುವುದು ಎಂದರು. ಗಾಂಧೀಜಿಯವರ ಅಭಿಪ್ರಾಯದಂತೆ ಜನತೆಗೆ ಹೆಚ್ಚು ಸ್ವಾತಂತ್ರ್ಯ, ಸರ್ಕಾರಕ್ಕೆ ಕಡಿಮೆ ಅಧಿಕಾರ ಇರಬೇಕು ಎಂದರು.

o o

1965 ನೆಯ ವರ್ಷದ ವೇಳೆಗೆ ಪ್ರಪಂಚದ ಭತ್ತದ ಉತ್ಪಾದನೆ ಶೇಕಡ 25 ರಷ್ಟು ಹೆಚ್ಚುವದು ಎಂದು ವ್ಯವಸಾಯ ಸಮಿತಿ ವರದಿ ತಿಳಿಸುವದಾಗಿ ರೋಮ್ ವಾರ್ತೆ.

o o

ಭೋಜಿಪುರ ಜಂಕ್ಷನ್ನಿನಲ್ಲಿ ಹಾವು ಅಡಿಸುವವನು ಮರಣಹೊಂದಿದ್ದ ಕಾರಣ ಬುಟ್ಟಿಯಲ್ಲಿದ್ದ ಅತಸ ಎಂಡು ಹಾವುಗಳನ್ನು ಪೋಲೀಸರು ವಶಪಡಿಸಿಕೊಂಡಿರುವರೆಂದು ಲಕ್ನೋ ವಾರ್ತೆ.

o o

ಕಾಂವಾಂಕ್ಕೆ 30 ಮೈಲಿಗಳ ದೂರದ ಸರಸಿಯಲ್ಲಿ ಸಿಡುಬು ಹಂಡಿದೆ

o o

ಅಲ್ಪ ಬೆಲೆಯ ಮೋಟಾರು ಕಾರುಗಳ ನಿರ್ಮಾಣದ ಬಗ್ಗೆ ಚುನಾವಣೆ ಸಂತರ ಪರಿಶೀಲಿಸಲಾಗುವದಾಗಿ ಕೇಂದ್ರ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಬೆಂಗಳೂರಿನಲ್ಲಿ ತಿಳಿಸಿದರು

o o

ಪಾಕಿಸ್ತಾನ ಸರ್ಕಾರದ ಜರೂರು ಕರೆಯ ಮೇಲೆ ಮೊನ್ನೆ ಸರ್ ಮಹಮದ್ ಜಫ್ರುಲ್ಲ ಕರಾಚಿಗೆ ಆಗಮಿಸಿದರು ಕಾಶ್ಮೀರ ಬಗ್ಗೆ ಹೊಸ ಸಲಹೆ ಪಡೆಯಲು ಈ ಕರೆ.

o o

ಮುಚ್ಚಿದ ಗ್ಯಾರೇಜಿನಲ್ಲಿ ಹೊಗೆಯು ಡೀಸೆಯಿಂದ ಮರಣಹೊಂದಿದನೆಂದು ಘೋಷಿಸಲ್ಪಟ್ಟ ಕ್ಲಾರಿಕಸೋರ್ವನು ಸತ್ತ ಸಮಾರು 90 ನಿಮಿಷಗಳಲ್ಲಿ ಕೃತಕ ಶ್ವಾಸೋಚ್ಛ್ವಾಸಗಳ ಮೂಲಕ ಸ್ಕಾಟ್‌ಲ್ಯಾನ್ಡಿನಲ್ಲಿ ಬದುಕಿಸಲ್ಪಟ್ಟನು

o o

ಪ್ರವಾಹ ಪೀಡಿತ ಹ್ಯಾಂಬರ್ಗಿನ ಹತ್ತಿರದ ವಿಲ್‌ಹೆಲ್ಮ್‌ಸಬರ್ಗಿನಲ್ಲಿ ನೂರಾರು ಜನರು ಸಿಕ್ಕಿಹಾಕಿಕೊಂಡಿರುವರು. ಪ್ರವಾಹದಲ್ಲಿ 99 ಜನ ಸತ್ತರು.

o o

ಈ ವಾರ ಹಾಂಕಾಂಗಿನಿಂದ 115 ಚೀನೀಯರು ತಪ್ಪಿಸಿಕೊಂಡುಹೋಗುವ ಪ್ರಯತ್ನ ಮಾಡಿದರು.

o o

ಪಂ|| ನೆಹರು ಆಗ್ರದಲ್ಲಿ ಭಾಷಣ ಮಾಡುತ್ತಾ, ಧರ್ಮದ ಹೆಸರಿನ ಮೇಲೆ ರಾಜ್ಯವನ್ನು ಕೋಮು ಪಕ್ಷಗಳು ವಿಭಜನೆ ಮಾಡುತ್ತಿವೆ ಎಂದರು.

o o

ಪಶ್ಚಿಮ ಬಂಗಾಳದ ಉತ್ತರ ಭಾಗದ ಜಿಲ್ಲೆಗಳಿಗೆ ಒಂದು ಹೊಸ ವಿಶ್ವ ವಿದ್ಯಾನಿಲಯ ಸ್ಥಾಪಿತವಾಗುವದು.

o o

ಭಾರತ ಸರ್ಕಾರದ ಚಲಚ್ಚಿತ್ರ ವಿಭಾಗದವರು ವರದಕ್ಷಿಣೆ ಪದ್ಧತಿಯ ಕೇಡುಗಳನ್ನು ವಿವರಿಸುವ ಚಲಚ್ಚಿತ್ರವೊಂದನ್ನು ತಯಾರಿಸಿದ್ದಾರೆ ಅದರ ಹೆಸರು ಒಣಗಿದ ಎಲೆಗಳು

ಕಾರಿಗೂ ಬಹಿಷ್ಕಾರ

ಪೂರ್ವ ಬರ್ಲಿನ್ನಿನಲ್ಲಿರುವ ಚೀನಾ ರಾಯಭಾರಿ ಹಾಗೂ ಇತರ ನೌಕರವರ್ಗದವರು ರಷ್ಯದಲ್ಲಿ ತಯಾರಿಸಿದ ಜಿಂ ಕಾರುಗಳನ್ನು ಬಿಟ್ಟು ಪಶ್ಚಿಮ ಜರ್ಮನಿಯಲ್ಲಿ ತಯಾರಿಸಿದ ಮರ್ಸಿಡೀಸ್ ಕಾರುಗಳನ್ನು ಉಪಯೋಗಿಸುತ್ತಿರುವರು

——

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ತರುವದಕ್ಕೆ ಬ್ರಿಟೀಷು ಲೇಬರ್ ಪಕ್ಷದ ಬೆಂಬಲದೊಡನೆ ಲಂಡನ್ನಿನಲ್ಲಿ ಸಮಿತಿಯೊಂದು ರಚನೆ ಆಗಿದೆ. ಪಾಕಿಸ್ತಾನದಲ್ಲಿ ಸೇನೆ ಸರ್ವಾಧಿಕಾರ ರದ್ದಾಗಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಜಾರಿಗೆ ಬರಬೇಕೆಂದು ಸಮಿತಿ ಒತ್ತಾಯ ಮಾಡಿದೆ

ಮೇ 5 ನೆಯ ತಾ|| ನಿಂದ ಬದರಿಯ ದೇವಾಲಯವನ್ನು ಯಾತ್ರಾರ್ಥಿಗಳಿಗೆ ತೆರೆಯಲಾಗುವುದು.

ಉತ್ತರ ಗೋವಾದ ಅಂಜುವಂಡೆ ಗಣಿಗಳಲ್ಲಿ ಆದ ಅಗ್ನಿ ಅನಾಹುತದಲ್ಲಿ ಮೊನ್ನೆಯ ದಿನ ಎಂಡು ಮಕ್ಕಳು ಸಜೀವ ಸುಟ್ಟು ಸತ್ತರು 3 ತಿಂಗಳ ಮಗುವಿಗೆ ತುಂಬಾ ಗಾಯವಾಗಿವೆ.

ನವ ದೆಹಲಿಯಿಂದ ಬಂದಿರುವ ವರದಿಯ ಸ್ಕಾರ ತುಗ್ಲಖಾಬಾದು ಫೈರಿಂಗು ರೇಂಜಿನಲ್ಲಿ ಗುಂಡುಹೊಡೆಯುವದನ್ನು ಅಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಈರ್ವರು ಮರಣ ಹೊಂದಿದರು.

ಭಾರತದ ಗಡಿಯಲ್ಲಿ ರಾಷ್ಟ್ರೀಯ ಘಾತುಕ ಶಕ್ತಿಗಳ ವಿರುದ್ಧ ಭಾರತ ಸರ್ಕಾರ ಕ್ರಮ ತೆಗೆದುಕೊಂಡಿದೆ ಎಂದು ನೇಪಾಳ ಹೊರೆ ಮಹೇಂದ್ರರು ಖಟ್ಮಂಡುವಿನಲ್ಲಿ ತಿಳಿಸಿದ್ದಾರೆ

ವಿಷ್ಣುಕ್ಕೆ ಪ್ರತ್ಯೇಕ ಕೋವಿಟ್ಟನ್ ರಚನೆ ಮಾಡಲು ಆಗ್ನೇಯ ವಿಷ್ಣು ಕಮ್ಯೂನಿಸ್ಟು ನಾಯಕರು ಪ್ರಯತ್ನ ಮಾಡುತ್ತಿದ್ದಾರೆ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

21 ದ್ವಿತೀಯ ಪುಬ್ಬ

ಒಪ್ಪಂದಕ್ಕೆ ಯತ್ನ

ಚುನಾವಣೆ ಆದನಂತರ ಚೀಣಾ-ಭಾರತದ ಗಡಿಕಲಹದ ಬಗ್ಗೆ ಒಂದು ವಿಧದ ಒಪ್ಪಂದಕ್ಕೆ ಬರುವ ಕುರಿತು ಪೀಕಿಂಗಿನಿಂದ ಪ್ರಯತ್ನ ಆಗಬಹುದೆಂದು ನವ ದೆಹಲಿಯ ರಾಜತಾಂತ್ರಿಕ ವಲಯಗಳಿಂದ ಗೊತ್ತಾಗಿದೆ. ಚೀಣೀಯರು ಈ ವಿಚಾರಂದಲ್ಲಿ ಚರ್ಚೆ ಮಾಡಲು ಆಸಕ್ತರಾಗಿದ್ದಾರೆ ಎಂದು ವಂದಿ.

ವಿಶೇಷ ಅಂಚೇ ಚೀಟಿ

ಮಾರ್ಚಿ 4 ನೆಯ ತಾ|| ಶ್ವಾ ಎ ದಯಾನಂದ ಸರಸ್ವತಿಯವರ ವಾರ್ಷಿಕೋತ್ಸವದ ಪ್ರಯುಕ್ತ 15 ನಯೆ ಪೈಸೆ ವಿಶೇಷ ಅಂಚೇಚೀಟಿ ಪ್ರಕಟವಾಗುವದು

ರಷ್ಯದ ಪ್ರತಿಜ್ಞೆ

ಕ್ಯೂಬಾಕ್ಕೆ ಬೆಂಬಲ ಮತ್ತು ಸಹಾಯವನ್ನು ಮುಂದುವರಿಸುವ ಪ್ರತಿಜ್ಞೆ ಯನ್ನು ರಷ್ಯ ಕೈಗೊಂಡಿದೆ ಎಂದು ಮಾಸ್ಕೋದಿಂದ ವಾರ್ತೆ ಬಂದಿದೆ.

ಆಗಮನ

ವೈದ್ಯ ಪರೀಕ್ಷೆ ಹಾಗೂ ವಿಶ್ರಾಂತಿಗೋಸ್ಕರ ಅಮೆರಿಕಾಕ್ಕೆ ಹೋಗಿದ್ದ ಭಾರತದ ಅಮೆರಿಕಾ ರಾಯಭಾರಿ ಗಾಲ್ಬ್ರೈತ್ ಮೊನ್ನೆ ನವ ದೆಹಲಿಗೆ ವಾಪಸಾದರು.

ನಿರ್ಧಾರವಾಗಿಲ್ಲ

ಮಾರ್ಚಿ 14 ನೆಯ ತಾ|| ನಿಂದ ಆರಂಭವಾಗಬೇಕೆಂಡು ಪ್ರಧಾನಿ ಕೃಶ್ಚೇವರ ಸೂಚನೆಯ ಜಿನೀವಾ ಸಮ್ಮೇಳನದಲ್ಲಿ ಭಾಗವಹಿಸುವ ನಿರ್ಧಾರವನ್ನು ಸಂಯುಕ್ತ ಅಂಬ ಗಣರಾಜ್ಯದ ಅಧ್ಯಕ್ಷ ನಾಸೆರರು ನಿರ್ಧರಿಸಿಲ್ಲ

ನೆಹರು ಹೋಗುವುದಿಲ್ಲ

ಹದಿನೆಂಟು ರಾಷ್ಟ್ರಗಳ ಉನ್ನತ ಸಮ್ಮೇಳನವನ್ನು ಕೃಶ್ಚೇವರು ಸೂಚನೆ ಮಾಡಿರುವ ಬಗ್ಗೆ ಇನ್ನೆರಡು ದಿನಗಳಲ್ಲಿ ಉತ್ತರ ಕೊಡುವದಾಗಿ ನವ ದೆಹಲಿಯಲ್ಲಿ ಪ್ರಧಾನಿ ಪಂ|| ನೆಹರು ತಿಳಿಸಿದರು. ಸಮ್ಮೇಳನದ ತಾ|| ತಮಗೆ ಅನುಕೂಲವಾಗಿಲ್ಲದ ಕಾರಣ ತಾವು ಜಿನೀವಾಕ್ಕೆ ಹೋಗುವದಿಲ್ಲವೆಂದು ತಿಳಿಸಿದರು.

ವುಡ್‌ಲಾಂಡ್ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿರುವ ಅಮೋಘ 2 ನೇ ವಾರ

.... 30,000 ಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿರುವರು ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ — 18—2—62 ರಿಂದ

ನದಾರಮೆ (ಕನ್ನಡ)

ತಾರಾಗಣ— ಜಿ ಹೆಚ್ ವೀರಣ್ಣ, ಸಾಹುಕಾರ್ ಜಾನಕಿ, ಕಲ್ಯಾಣಕುಮಾರ್

ರಾಜಾ ಸುಲೋಚನ, ಪದ್ಮಿನಿ ಪ್ರಿಯದರ್ಶಿನಿ [ದಿನವಹಿ 3 ಆಟಗಳು]

ಮೈಸೂರುನಗರ (ದಕ್ಷಿಣ) ಕ್ಷೇತ्रದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನ ಕ್ಷ ತ್ರ X ಹೀಗೆ ಸೀಲ್ ಹಾಕಿ

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನುಳ್ಳ

ಹೆಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

SHAKTI
SUDHA

A Superb Tonic

Help ' The Gorakshana '

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

Mysore City Municipality

★

City Municipal Council
Mysore
Dated 5–2–1962

NOTIFICATION

Re : Quotations for the supply of the following, as detailed below, for the year 62-63.

Notice is hereby given that sealed tenders with samples will be received by the undersigned at the office, for the year 62-63 on or before Friday the 9 th March 1962. at 4 p. m.

1 Each tender must be accompanied by a chellan for having deposited the tender deposit as noted below against the item in cash to the Municipal Treasury as earnest money in default of which tenders will be rejected.

2 Particulars may be had at the Office on all working days or on a reference to this office.

Particulars	Details	Deposits
1) Phenyle : 2500 Gallons (Imperial) A test certificate from the Chemical Examiner Bangalore xc. R.W. coefficient should be sent along with the tender or else the tender will not be entertained		Rs 100
2) Stationary Articles (list may be obtained on application)		Rs 100

(Sd) C. R. Balasubramanyam
Commissioner I/c
City Municipal Council
Mysore